# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/GLB/1823/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 11-01-2022.

1-28

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ. ಮರಿಯಪ್ಪ, ಹೆಚ್, ಎ.ಇ.ಇ. ತಾಂತ್ರಿಕ ಶಾಖೆ, ಮಹಾನಗರ ಪಾಲಿಕೆ, ತುಮಕೂರು, ತುಮಕೂರು ಜಿಲ್ಲೆ, – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ತುಮಕೂರು, ತುಮಕೂರು ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ. ಮರಿಯಪ್ಪ, ಹೆಚ್, ಎ.ಇ.ಇ. ತಾಂತ್ರಿಕ ಶಾಖೆ, ಮಹಾನಗರ ಪಾಲಿಕೆ, ತುಮಕೂರು, ತುಮಕೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಜಗದೀಶಯ್ಯ ಕೆ.ಆರ್. ಬಿನ್ ರಾಜಣ್ಣ, ಲ್ಯಾಂಡ್ ಸ್ಕೇಪ್ ಡೆವಲಪರ್ಸ್, ವಸಂತ ನರಸಾಪುರ ಕೈಗಾರಿಕಾ ಪ್ರದೇಶ, 3ನೇ ಹಂತ, ಕೆಂಪನದೊಡ್ಡೇರಿ, ಕೋರಾ ಹೋಬಳಿ, ತುಮಕೂರು ತಾ: ತುಮಕೂರು ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i). ದೂರುದಾರರು ತುಮಕೂರು ನಗರ, ವಾರ್ಡ್ ನಂ.08ರ ಕೆಹೆಚ್‌ಬಿ ಕಾಲೋನಿ, ತಿಲಕ್ ಪಾರ್ಕ ಪೋಲೀಸ್ ಠಾಣೆ ಹಿಂಬಾಗದ ಉದ್ಯಾನವನವನ್ನು ಅಭಿವೃದ್ಧಿ ಕಾಮಗಾರಿಯ ಟೆಂಡರ್‌ನ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ವ್ಯತ್ಯಾಸದ ಮೊತ್ತವನ್ನು ಹಿಂದುರುಗಿಸಲು ಎದುರುದಾರರನ್ನು ಕೇಳಿದಾಗ, ಎದುರುದಾರರು 20,000/– ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಂಡು, ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಪ್ರಯುಕ್ತ ಎಸಿಬಿ ಠಾಣೆ

ತುಮಕೂರು, ಇಲ್ಲಿಗೆ ಹಾಜರಾಗಿ ದಿ. 20/11/2018 ರಂದು ದೂರು ನೀಡಿರುತ್ತಾರೆ, ಹಾಗೂ ಲಂಚದ ಹಣ 20,000/- ಬೇಡಿಕೆ ಇಟ್ಟ ಸಂಭಾಷಣೆಯನ್ನು ಒಳಗೊಂಡ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ದೂರಿನ ಮೇರೆಗೆ ಮೊಕದ್ದಮೆ ಸಂ.16/2018 ರಂತೆ ಪಿ.ಸಿ.ಕಾಯ್ದೆ 1988 ಕಲಂ 7ರನ್ವಯ ಪ್ರ. ವ. ವರದಿ ದಾಖಲಾಗಿರುತ್ತದೆ.

ii). ದಿನಾಂಕ: 20/11/2018ರಂದು ತನಿಖಾಧಿಕಾರಿಗಳು ಪಂಚರಾದ ರವಿಕುಮಾರ್ ಕೆ. ಪಂಚ-1 ಮತ್ತು ಅಬ್ದುಲ್ ಸಲಾಂ, ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿರುತ್ತಾರೆ. ನಂತರ ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ 10,000/- ರೂ.ಗಳನ್ನು (500/- ಮುಖಬೆಲೆಯ 19-ನೋಟುಗಳು ಹಾಗೂ 100/- ಮುಖಬೆಲೆಯ 05-ನೋಟುಗಳು) ಹಾಜರುಪಡಿಸಿರುತ್ತಾರೆ. ಸದರಿ ನೋಟುಗಳ ಮೌಲ್ಯ ಮತ್ತು ನಂಬರುಗಳನ್ನು ಪಂಚರು ಪರಿಶೀಲಿಸಿದ್ದು, ಪಂಚ-1ರವರು ಸದರಿ ನೋಟುಗಳ ಮೌಲ್ಯ ಮತ್ತು ನಂಬರುಗಳನ್ನು ಬಿಳಿ ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚ-2, ಪೋಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲಿನ್ ಪೌಡರ್ ಸಿಂಪಡಿಸಿದ ಹಣವನ್ನು ಪರಿಶೀಲಿಸಿ, ದೂರುದಾರರ ಶರ್ಟಿನ ಮೇಲ್ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ಸೂಚನೆ ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ ದೂರುದಾರರು ತನ್ನ ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ನೀಡುವಂತೆ ಹಾಗೂ ಪಂಚ-1ರವರು ದೂರುದಾರರವರ ಜೊತೆಯಿದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ ಹಾಗೂ ತನಿಖಾಧಿಕಾರಿಯವರು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯು ದಿ.20/11/2018ರಂದು ಬೆಳಿಗ್ಗೆ 11-45 ಗಂಟೆಯಿಂದ 12-45ರವರೆಗೆ ಪ್ರಾಯೋಗಿಕ ಪಂಚನಾಮೆ ಪ್ರಕ್ರಿಯೆ ಜರುಗಿಸಿರುತ್ತಾರೆ.

iii). ದಿ.20/11/2018ರಂದು ತನಿಖಾಧಿಕಾರಿಯವರು ಪಂಚರನ್ನು, ದೂರುದಾರರನ್ನು ಹಾಗೂ ಸಿಬ್ಬಂದಿಯವರನ್ನು ಕಾರ್ಯಾಚರಣೆಗಾಗಿ ಇಲಾಖಾ ವಾಹನದಲ್ಲಿ ಕರೆದುಕೊಂಡು ಎದುರುದಾರರ ಕಚೇರಯ ಬಳಿ ಬಂದು, ದೂರುದಾರರನ್ನು ಹಾಗೂ (ನೆರಳು ಸಾಕ್ಷಿ) ಪಂಚ-1 ರವರನ್ನು ಎದುರುದಾರರನ್ನು ಭೇಟಿಮಾಡಲು ಮತ್ತೊಮ್ಮೆ ಸೂಚನೆಯನ್ನು ನೀಡಿ ಕಳುಹಿಸಿರುತ್ತಾರೆ. ನಂತರ ದೂರುದಾರರು, ಪಂಚ-1ರವರ ಜೊತೆ ಎದುರುದಾರರ ಕಚೇರಿಯ ಬಳಿ ಹೋದಾಗ, ಎದುರುದಾರರು ಕಚೇರಿಯ ಹೊರಗಡೆ ನಿಂತಿದ್ದು, ದೂರುದಾರರನ್ನು ಕಂಡು ಏನಯ್ಯ ಹಣ ತಂದಾ ಎಂದು ಕೇಳಿದಾಗ, ದೂರುದಾರರು ಹೂಂ ಸಾರ್ ಎಂದು ಹೇಳಿ, ತನ್ನ ಶರ್ಟಿನ ಮೇಲ್ಭಾಗದ ಜೇಬಿನಲ್ಲಿದ್ದ ಫಿನಾಪ್ತಿಲೀನ ಲೇಪಿತ ಲಂಚದ ಹಣವನ್ನು ಎದುರುದಾರರಿಗೆ ಕೊಟ್ಟಿರುತ್ತಾರೆ. ಸದರಿ ಹಣವನ್ನು ಎದುರುದಾರರು ಬಲಗೈಯಿಂದ ಪಡೆದು, ಕಚೇರಿಯ ಮುಂಭಾಗದಲ್ಲಿ ಕಾರಿನ ಬಳಿ ಹೋಗಿ, ಕಾರಿನ ಹ್ಯಾಂಡ್ ಬ್ರೇಕ್ ಕೆಳಗೆ ಇದ್ದ ಓಪನ್ ಬಾಕ್ಸ್‌ನಲ್ಲಿ ಇಟ್ಟಿರುತ್ತಾರೆ. ತಕ್ಷಣ

ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಾಗ, ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ಎದುರುದಾರರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯು ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಅವರ ವಿರುದ್ಧ ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯು ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೊನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ, ಎದುರುದಾರರು ತಾನು ದೂರುದಾರರಿಂದ ಪಡೆದ ಲಂಚದ ಹಣವನ್ನು ತನ್ನ ಕಾರಿನ ಹ್ಯಾಂಡ್ ಬ್ರೇಕ್ ಕೆಳಗಡೆ ಇದ್ದ ಓಪನ್ ಬಾಕ್ಸ್‌ನಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸದರಿ ಹಣವನ್ನು ಪಂಚರುಗಳು ಪರಿಶೀಲಿಸಿ, ಹಣದ ಮೌಲ್ಯ ಮತ್ತು ನಂಬರುಗಳನ್ನು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ನಮೂದು ಮಾಡಿದ್ದ ನೋಟುಗಳ ಮೌಲ್ಯ ಮತ್ತು ನಂಬರುಗಳಿಗೆ ತಾಳೆ ಮಾಡಿ ಖಾತ್ರಿಪಡಿಸಿದ ನಂತರ ತನಿಖಾಧಿಕಾರಿಯು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯು ಸದರಿ ಕಾರಿನ ಹ್ಯಾಂಡ್ ಬ್ರೇಕ್ ಕೆಳಗೆ ಲಂಚದ ಹಣ ಇಟ್ಟಿದ್ದ ಓಪನ್ ಬಾಕ್ಸ್ ಜಾಗವನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಸೋಡಿಯಂ ಕಾರ್ಬೊನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತದೆ. ನಂತರ ತನಿಖಾಧಿಕಾರಿಯು ಎದುರುದಾರರನ್ನು ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ಸಮಜಾಯಿಷಿಕೆಯನ್ನು ಕೇಳಲಾಗಿ, ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ ... "ಆದ ನಾನು ಲಿಖಿತ ಹೇಳಿಕೆ ನೀಡುವುದೇನೆಂದರೆ, ತಿಲಕ್ ಪಾರ್ಕ್ ಪೊಲೀಸ್ ಸ್ಟೇಷನ್ ಹಿಂಭಾಗದ ಉದ್ಯಾನವನದ ಅಭಿವೃದ್ಧಿ ಕಾಮಗಾರಿಯು ಅಮೃತ್ ಯೋಜನೆ ಅಡಿಯಲ್ಲಿ ನಿರ್ವಹಿಸಿದ್ದು ಕಾಮಗಾರಿಯ ಬಿಲ್ಲನ್ನು ತುಂಬಾ ಹಿಂದೆಯೇ ಪಾವತಿಸಲಾಗಿದೆ. ಟೆಂಡರ್ ಕರಾರಿನ ಸಮಯದಲ್ಲಿ ಟೆಂಡರ್ ವ್ಯತ್ಯಾಸದ ಮೊತ್ತವನ್ನು ಕಟ್ಟಲಾಗಿರುತ್ತದೆ. ಟೆಂಡರ್ ವ್ಯತ್ಯಾಸದ ಮೊತ್ತವನ್ನು ಬಿಡುಗಡೆ ಮಾಡಲು ಕಿರಿಯ ಅಭಿಯಂತರರು ಶಿಫಾರಸ್ಸು ಮಾಡಿದ್ದರು. ಕಾಮಗಾರಿಯ ಸ್ಥಳವನ್ನು ಪರಿಶೀಲಿಸಿದಾಗ ಕಾಮಗಾರಿಯ ಸ್ಥಳದಲ್ಲಿ ಕಂಡು ಬಂದಂತಹ ನ್ಯೂನ್ಯತೆಗಳನ್ನು ಶಾಖಾಧಿಕಾರಿಗಳಿಗೆ ತಿಳಿಸಿ ನ್ಯೂನ್ಯತೆಗಳನ್ನು ಸರಿಪಡಿಸಿ ಕಡತವನ್ನು ಮರು ಸಲ್ಲಿಸಲು ನೋಟ್ ಶೀಟ್‌ನಲ್ಲಿ ನಮೂದಿಸಿ ಹಿಂತಿರುಗಿಸಲಾಗಿತ್ತು. ಆದರೆ ಮಾನ್ಯ ದೂರುದಾರರು ಕೂಲಿಕಾರ್ಮಿಕರನ್ನು ನೇಮಿಸಿ ನ್ಯೂನ್ಯತೆಗಳನ್ನು ಸರಿಪಡಿಸುತ್ತೇನೆ. ಅದಕ್ಕೆ ತಗಲಬಹುದಾದ ವೆಚ್ಚವನ್ನು ನೀವೇ ಭರಿಸಬೇಕಾಗಿರುತ್ತದೆಂದು ತಿಳಿಸಲಾಗಿತ್ತು. ಗುತ್ತಿಗೆದಾರರು ಕೂಲಿ ಕಾರ್ಮಿಕರ ಕೂಲಿ ಮೊತ್ತವನ್ನು ನೀಡದೆ ಇದ್ದುದರಿಂದ ನನ್ನ ಸ್ವಂತ ಹಣದಿಂದ ಕಾರ್ಮಿಕರಿಗೆ ಕೂಲಿ ಹಣವನ್ನು ಪಾವತಿಸಲಾಗಿತ್ತು. ಸದರಿ ಕೂಲಿ ಹಣವನ್ನು ಹಿಂದಿರುಗಿಸುವಾಗ ದುರುದ್ದೇಶದಿಂದ ಎ.ಸಿ.ಬಿ. ಪೊಲೀಸ್ ನಿರೀಕ್ಷಕರಿಂದ ದಾಳಿ ಮಾಡಿಸಿರುತ್ತಾರೆ. ಕೂಲಿ ಕಾರ್ಮಿಕರ ಹಣವನ್ನು ಕೇಳಿದ್ದೆ ನೆಪವಿಟ್ಟುಕೊಂಡು ಆರೋಪಿಸಿರುತ್ತಾರೆ. ಇವರ ಆರೋಪವು ಸತ್ಯಕ್ಕೆ ದೂರವಾದುದೆಂದು ತಿಳಿಸಬಯಸುತ್ತೇನೆ ಎಂದು ಸಮಜಾಯಿಷಿಕೆಯನ್ನು ನೀಡಿರುತ್ತಾರೆ". ನಂತರ, ತನಿಖಾಧಿಕಾರಿಯು ಎದುರುದಾರರ ಸಮಜಾಯಿಷಿಕೆಯ ಬಗ್ಗೆ

ದೂರುದಾರರ ಅಭಿಪ್ರಾಯ ಕೇಳಿದಾಗ, ಎದುರುದಾರರು ಈ ದಿನ ಲಂಚದ ಹಣವನ್ನು ಕೇಳಿ ಪಡೆದರು ಎಂದು ದೂರುದಾರರು ಹೇಳಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ ಹಾಗೂ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯವರು ಟ್ರಾಪ್ ಪಂಚನಾಮೆಯನ್ನು ಮಧ್ಯಾಹ್ನ 1-15ರಿಂದ ಸ: 5-30ರವರೆಗೆ ಬರೆದಿರುತ್ತಾರೆ.

iv). ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಹಾಗೂ ಅವರ ಮಾದರಿ ಧ್ವನಿಗೆ, ಹೋಲಿಕೆ ಇರುವ ಬಗ್ಗೆ, ವರದಿಯನ್ನು ಕೋರಿ ತನಿಖಾಧಿಕಾರಿಯವರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

vi). ಎದುರುದಾರರಿಗೆ ದಿ: 26/08/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತಮ್ಮ ವಿವರಣೆಯನ್ನು ದಿ: 18/09/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ತನಿಖಾಧಿಕಾರಿಯು ಅಮಾನತ್ತುಪಡಿಸಿದ ದಾಖಲೆಗಳ ಪೈಕಿ ಕಚೇರಿ ಟಿಪ್ಪಣಿಯ ಕಂಡಿಕೆ: 17 ರಿಂದ 21 ವರೆಗಿನ ಅಂಶಗಳನ್ನು ಉಲ್ಲೇಖಿಸಿದ್ದು, ಸದರಿ ಅಂಶವನ್ನು ಪರಿಶೀಲಿಸಿದಾಗ, ಎದುರುದಾರರು ತನಿಖಾಧಿಕಾರಿಯ ಮುಂದೆ ನೀಡಿದ ಸಮಜಾಯಿಷಿಕೆಯ ಅಂಶವನ್ನೇ ಮತ್ತೆ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ. ಮುಂದುವರೆದು, ದಿ: 20/11/2018 ರಂದು ದೂರುದಾರರ ಕೆಲಸ ಎದುರುದಾರರ ಹತ್ತಿರ ಬಾಕಿ ಇರುವುದಿಲ್ಲ ಹಾಗೂ ಯಾವುದೇ ಕಡತ ಸಹ ಬಾಕಿ ಇರುವುದಿಲ್ಲ. ದಿ: 20/11/2018 ರಂದು ಟ್ರ್ಯಾಪ್ ಆದ ದಿನ, ತನಿಖಾಧಿಕಾರಿಯು ಕಾರ್ಯಪಾಲಕ ಅಭಿಯಂತರರ ವಿಭಾಗದಿಂದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿ ಸಂಗ್ರಹಿಸಿರುವ ಡಿ.ವಿ.ಡಿ ಮತ್ತು ಮೆಮೋರಿ ಕಾರ್ಡ್‌ನ್ನು ಸದರಿ ಪ್ರಕರಣಕ್ಕೆ ಸೃಷ್ಟಿಮಾಡಿರುತ್ತದೆ. ಮಾನ್ಯ 7ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು, Spl.Case No: 392/2019 ರಲ್ಲಿ ಎದುರುದಾರರನ್ನು ಬಿಡುಗಡೆ ಮಾಡಿದ್ದು, ದಿ: 13/09/2021ರ ತೀರ್ಪಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಎದುರುದಾರರನ್ನು ವಿಚಾರಣೆ ಮಾಡದೇ ಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು